ಅವರು ಈಗಾಗಲೇ ಅಲ್ಲಿ ಕಟ್ಟುತ್ತಿದ್ದಾರೆ ಹಾಗೂ ಡಾಕ್ಟರ್‌ರವರಿಗೂ ಸಹ ಮನೆಯನ್ನು ಕಟ್ಟಿಕೊಡುತ್ತಿದ್ದಾರೆ ಆದುದರಿಂದ ಸರ್ಕಾರದ ಪಾಲಿಸಿ ಪ್ರಕಾರ ಅವರಿಗೆ ಅಲ್ಲಿ ಆಸ್ಪತ್ರೆಯನ್ನು ಕೊಡಲು ಭರವಸೆ ಕೊಡುತ್ತೀರಾ ?

†ಶ್ರೀ ಎಸ್. ಸಿದ್ದವೀರಪ್ಪ.—ನಾನು ರಿಪೋರ್ಟ್ ತರಿಸಿ ನೋಡಿದ್ದೇನೆ. ನೇರಳಗುಡ್ಡ ಬಹಳ ಸಣ್ಣ ಹಳ್ಳಿ ಅಲ್ಲಿ 696 ಪ್ರಜಾಸಂಖ್ಯೆಯನ್ನುಳ್ಳದಾಗಿದೆ. ಮತ್ತು ನುತ್ತಲು ಇರತಕ್ಕಂಥ ಬೇರೆ ಬೇರೆ ವಿಲೇಜಸ್‌ಗಳಲ್ಲಿರತಕ್ಕಂಥವರ ಸಂಖ್ಯೆಯನ್ನು ಸೇರಿಸಿದರೆ 3600 ಪಾಪ್ಯುಲೇಷನ್ ಆಗುತ್ತದೆ. ಅದು ನೋ ಪೆಕೆಂಟ್‌ನಲ್ಲಿ ಬರುವುದಿಲ್ಲ. ಅಲ್ಲಿಗೆ ಕೊಡತಕ್ಕಂಥದ್ದು ಕಷ್ಟ ಎನ್ನತಕ್ಕಂಥದ್ದು ರಿಪೋರ್ಟ್‌ನಲ್ಲಿ ಬಂದಿದೆ. ತಾವು ಈಗ ಅಲ್ಲಿ ಬಿಲ್ಡಿಂಗ್ ಕಟ್ಟಿಸಿಕೊಡುತ್ತಿದ್ದಾರೆ, ಜಾಗ ಮಾಡಿ ಕೊಡುತ್ತಿದ್ದಾರೆ ಹಾಗೆಂದು ಹೇಳಿದಿರಿ. ರೀತಿಯ ಅನುಕೂಲಗಳನ್ನು ಆಲ್ಲತಾವು ಮಾಡಿಕೊಡುವುದಾದರೆ ವಿಚಾರ ಮಾಡೋಣ.

ಶ್ರೀ ತಾರೇಗೌಡ.—ಸ್ವಾಮಿ, ಅಲ್ಲಿಯ ಪ್ರಜಾಸಂಖ್ಯೆ 696 ಆದರೂ ಸಹ ನುತ್ತಮುತ್ತಲಿರತಕ್ಕಂಥ ಜನರು ಈ ಜಾಗಕ್ಕೆ ಬಂದು ಚೆಂದಾ ಕೊಟ್ಟು ಬಹಳ ಇಂಟ್ರೆಸ್ಟ್‌ನಿಂದ ಇಲ್ಲಿ ಆಸ್ಪತ್ರೆ ಆಗಬೇಕೆಂದು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಇಷ್ಟರಲ್ಲಿಯೇ ಕಟ್ಟಡವನ್ನು ಕಟ್ಟಿ ಪೂರೈಸುತ್ತಾರೆ. ಈ ವರ್ಷ ಇಲ್ಲದಿದ್ದರೆ ಮುಂದಿನ ಸರಿಗಾದರೂ ಕೊಡುವುದಕ್ಕೆ ಭರವಸೆಯನ್ನು ಕೊಡುತ್ತಿರಾ ?

ಶ್ರೀ ಹೆಚ್. ಸಿದ್ದವೀರಪ್ಪ : ನಾನು ಅದನ್ನು ವಿಚಾರ ಮಾಡುತ್ತೇನೆ, ನೀವು ಮೊದಲು ಅಲ್ಲಿ ಕಟ್ಟಡವನ್ನು ತಯಾರು ಮಾಡಿ.

* *Compensation to Jodidars of Jodi Handral Village of Belur Taluk.*

555. SRI K. H. HANUMEGOWDA (Hassan)—Will the Minister for Revenue be pleased to state :—

(*a*) the year in which and the amount of compensation paid to the Jodidars of Jodi Handral Village, Madihalli Hobli in Belur Taluk (the names of Jodidars may be furnished) ;

(*b*) the extent of Jodi land held by them ;

(*c*) the amount of miscellaneous compensation paid for this Village ;

(Sri K. H. Hanumegowda)

(*d*) the reasons for paying the miscellaneous compensation;

(*e*) the Jodidars to whom the miscellaneous compensation has been paid;

(*f*) whether it is fact that the complaints have been received by the Government to the effect that the said compensation has been paid on false account and requesting to conduct a detailed enquiry;

(*g*) if so, whether the Government have conducted an enquiry in this behalf;

(*h*) the result of the enquiry?

SRI N. HUTCHAMASTHY GOWDA (Minister for Revenue):

(*a*) A sum of Rs. 1,23,76 has been paid to the Jodidars of Handral Jodihalli by way of compensation during 1969. The names of Jodidars are shown in the statement placed on the Table of the House.**

(*b*) Right of occupancy has been granted in respect of 308 Acres, 19 Guntas.

(*c*) Rs. 1,05,500

(*d*) As per provisions of law

(*e*) The amount collected under all heads will be paid by way of compensation. Details are furnished in the statement placed on the Table of the House.**

(*f*) No such complaints have been received. But as the D visional Commissioner of Mysore has opined

---

** Copies placed in the Karnataka Legislative Library vide No. 40 dated 24-3-75.

that the amount fixed is in excess the Government has filed an appeal in the High Court.

(*g*) *No*

(*h*) Does not arise

ಶ್ರೀ ಕೆ. ಹೆಚ್. ಹನುಮೇಗೌಡ:— ಸ್ವಾಮಿ, (ಇ) ಪ್ರಶ್ನೆಗೆ 1,05,500 ರೂಪಾಯಿಗಳನ್ನು ಕೊಡಲಾಗಿದೆಂದು ತಿಳಿಸಿದ್ದೀರಿ. ಯಾವ ಯಾವ ಐಟಂಗಳಿಗೆ ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

‡ಶ್ರೀ ಎನ್. ಹುಚ್ಚಮಾಸ್ತಿಗೌಡ;—ಆ ಐಟಂ ವಿವರವಿಲ್ಲ. ಹುಣಸೇ ಹಣ್ಣು, ಖನಿಜ ಸಂಪತ್ತು, ಮತ್ಸ್ಯೋದ್ಯಮ, ಗ್ರಾಮ ಠಾಣ ಇಂಥ ಐಟಂಗಳೆಲ್ಲಾ ಅದರಲ್ಲಿ ಸೇರಿದೆ.

ಶ್ರೀ ಕೆ.ಹೆಚ್.ಹನುಮೇಗೌಡ: ಸ್ವಾಮಿ, ಈ ಮಿಸಲೇನಿಯಸ್ ಕಾಂಪನ್ ಸೇಷನ್ ಕೊಟ್ಟಿರುವುದು 1 ಲಕ್ಷದ 5 ಸಾವಿರದ 5 ನೂರು ರೂಪಾಯಿಗಳನ್ನು ಕೊಟ್ಟಿರುವುದು, ನ್ಯಾಯವಾದ ಆಧಾರದ ಮೇಲೆ ಕೊಟ್ಟಿಲ್ಲ. ಈ ಗ್ರಾಮದಲ್ಲಿ ಯಾವ ವಿಧವಾದಂಥ ಹೇಳಿಕೊಳ್ಳುವ ಮಟ್ಟಿನ ಯಾವ ಸಂಪತ್ತೂ ಇರಲಿಲ್ಲ. ಆದರೆ ಅಲ್ಲಿಯ ಅಧಿಕಾರಿಗಳು ಮತ್ತು ಜೋಡಿದಾರರು ಸ್ವಾಮೀಲು ಆಗಿ ಆ ದಡ್ಡನ್ನು ಮಂಜೂರು ಮಾಡಿ, ಸುಮಾರು ಅರ್ಧಭಾಗವನ್ನು ಅಧಿಕಾರಿಗಳು ಮತ್ತೆ ಇನ್ನರ್ಧ ಭಾಗವನ್ನು ಜೋಡಿದಾರರು ಹಂಚಿಕೊಂಡಿದ್ದಾರೆ ಎನ್ನುವ ಬಗ್ಗೆ ಅನೇಕ ಅರ್ಜಿಗಳು ಸರಕಾರಕ್ಕೆ ಬಂದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ:— ಆ ರೀತಿಯ ಅರ್ಜಿಗಳು ಬಂದಿರ ಬಹುದು. ಅದರ ವಿವರ ನನ್ನ ಹತ್ತಿರವಿಲ್ಲ, ಆದರೆ ಅಡಿಷನಲ್ ಕಮಿಷನರ್ ರವರು ಅದಕ್ಕೆ ಕೊಟ್ಟಿರತಕ್ಕಂಥದ್ದಕ್ಕೆ ಅಭ್ಯಂತರವಿಲ್ಲ, ಅದರೆ ಕೊಡುವುದಕ್ಕಿಂತ ಮುಂಚೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಮೊದಲು ಕೇಳಬೇಕಾಗಿತ್ತು. ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಸರ್ವೆ ವಗೈರೆ ಅಂಥದ್ದು ಮಾಡಬೇಕಾಗಿತ್ತು ಎಂದು ಹೇಳಿ ತಿಳಿಸಿದರ ಮೇಲೆ ಆ ಅಧಿಕಾರಿಗಳ ಮೇಲೆ ಸರ್ಕಾರ ಹೈಕೋರ್ಟಿನಲ್ಲಿ ಅಪೀಲು ಮಾಡಿದೆ ಇದರಲ್ಲಿ ಹಿಂದೆ ಒಂದು ಪ್ರಶ್ನೆಗೆ ಉತ್ತರ ಹೇಳಿದೆ, ಮತ್ಸ್ಯೋದ್ಯಮ, ಹುಲ್ಲು, ಕವಣಿ, ಮಾವು, ಅಂಚೆ ಕಡ್ಡಿ ಜೊಡಿ ಮಣ್ಣು, ಇನ್ನು ಮುಂತಾದವುಗಳಿಗೆ ಕೊಟ್ಟಿದ್ದು ಎಪರೀತವಾಗುತ್ತದೆ ಹಾಗೆಂತ ಹೇಳಿ ಹೈಕೋರ್ಟಿನಲ್ಲಿ ಸರ್ಕಾರ ಅಪೀಲು ಮಾಡಿದೆ.

ಶ್ರೀ ಕೆ. ಹೆಚ್. ಹನುಮೇಗೌಡ:— ಸ್ವಾಮಿ ಕೊಟ್ಟಿರುವ ಮೊಬಲಗು, ಉತ್ಪ್ರೇಕ್ಷೆಯ ಮೇಲೆ ಕೊಟ್ಟಿರುವುದು, ಆಧಾರ ಇಲ್ಲದೇ ಹೋದರೆ ಇದರ ಬಗ್ಗೆ

(ಶ್ರೀ ಕೆ. ಎಚ್. ಹನುಮೇಗೌಡ)

ನೂಕ್ತ ವಿಚಾರಣೆಯನ್ನು ನಡೆಸಬೇಕು, ಆ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಸರಕಾರದವರು ಹೈಕೋರ್ಟಿನಲ್ಲಿ ಅಪೀಲು ಮಾಡಿರುವುದರಿಂದ, ಅಲ್ಲಿಂದ ತೀರ್ಮಾನವಾಗಿ ಬಂದಮೇಲೆ ಯಾರು ಯಾರು ಯಾವ ರೀತಿಯಾಗಿ ಕೊಟ್ಟಿದ್ದಾರೆ, ನ್ಯಾಯವಾಗಿ ಕೊಡಬೇಕಾದ ರೀತಿಯಲ್ಲಿ ಕೊಟ್ಟಿದ್ದಾರೋ ಇಲ್ಲವೋ ಎನ್ನುವುದನ್ನೆಲ್ಲಾ ತಿಳಿದು, ಅಲ್ಲಿಂದ ತೀರ್ಮಾನವಾಗಿ ಬಂದ ಮೇಲೆ ನಾವು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

**Bridge across Kurady River in Hanchally Village*

66 . SRI JAYAPRAKASH SHETTY (Brahmavar) :—

Will the Minister for Public Works be pleased to state :—

(*a*) whether plan and estimate has been prepared for the construction of a bridge across Kurady river in Hanchally village of Udipi ;

(*b*) if so, when ;

(*c*) whether the Government has received and representation in this regard ;

(*d*) the reasons for delay in taking up and executing the work ?

SRI N. HUTCHMASTHY GOWDA (Minister for *Revenue*) (On behalf of) SRI H. M. CHANNABASAPPA (Minister for Public Works) :—

(*a*) Yes.

(b) June 1964.

(*c*) Yes.

(*d*) Paucity of funds.